ಆ) ರಾಜ್ಯದಲ್ಲಿ 224 ವಿಧಾನ ಸಭಾ ಕ್ಷೇತ್ರಗಳು ಇದ್ದು, ಇವುಗಳಲ್ಲಿ ಈಗಾಗಲೇ 119 ವಿಧಾನ ಸಭಾ ಕ್ಷೇತ್ರಗಳಿಗೆ ಆರಾಧನಾ ಸಮಿತಿಯನ್ನು ರಚಿಸಲಾಗಿದೆ 94 ವಿದಾನ ಸಭಾ ಕ್ಷೇತ್ರಗಳಿಗೆ ಸಮಿತಿ ರಚಿಸಲು ಪರಿ ಶೀಲಿಸಲಾಗತ್ತಿದ್ದು, 11 ವಿದಾನ ಸಭಾ ಕ್ಷೇತ್ರಗಳ ಸಮಿತಿ ರಚನೆ ಕುರಿತು ಪ್ರಸ್ತಾವನೆಗಳನ್ನು ನಿರೀಕ್ಷಿಸಲಾಗಿದೆ

ಇ) 2007–08ನೇ ಸಾಲಿನಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ತಲಾ ರೂ,10 00 ಲಕ್ಷದಂತೆ ಒಟ್ಟು ರೂ 2240 00 ಲಕ್ಷಗಳನ್ನು ಆಯವ್ಯಯದಲ್ಲಿ ಮೀಸಲಿಡಲಾಗಿದೆ

ದೊಡ್ಡ ಬಳ್ಳಾಪುರ ವಿಧಾನ ಸಭಾ ಕ್ಷೇತ್ರಕ್ಕೆ ಪ್ರಸ್ತುತ ನಿಗಧಿಪಡಿಸಲಾದ ರೂ,10 00 ಲಕ್ಷಗಳ ಪೈಕಿ ರೂ 3 33 ಲಕ್ಷ ಬಿಡುಗಡೆ ಮಾಡಲಾಗಿದೆ

213 (243) ಶ್ರೀ ನರೇಂದ್ರಬಾಬು ನೆ ಲ(ರಾಜಾಜಿನಗರ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) 2006–07 ನೇ ಸಾಲಿನಲ್ಲಿ ಸಾಲದ ಭಾದೆಯಿಂದ ಆತ್ಮಹತ್ಯೆಗೆ ಒಳಗಾದ ರೈತರ ಸಂಖ್ಯೆ ಎಷ್ಟು,

ಆ) ಸಾವಿಗೀಡಾದ ರೈತರಲ್ಲಿ ಖಾಸಗಿ ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದವರ ಸಂಖ್ಯೆ ಎಷ್ಟು,

ಇ) ಆತ್ಮಹತ್ಯೆಗೊಳಗಾದ ಕುಟುಂಬದಲ್ಲಿ ಒಬ್ಬರಿಗೆ ಉದ್ಯೋಗ ನೀಡುವ ಯೋಜನೆ ಸರ್ಕಾರದ ಮುಂದಿದೆಯೀ,

ಈ) ರೈತರ ಆತ್ಮಹತ್ಯೆಗೆ ಕಾರಣರಾದ ಖಾಸಗಿ ಹಣಕಾಸು ಸಂಸ್ಥೆಗಳ ವಿರುದ್ಧ ಕ್ರಮಗಳನ್ನು ಜರುಗಿಸಲಾಗಿದೆಯೇ ,

ಈ) ದಲ್ಲಾಳಿಗಳು ರೈತರಿಗೆ ಬಡ್ಡಿಗೆ ಹಣ ಕೊಡುವುದನ್ನು ನಿಯಂತ್ರಿಸಲು ಕಾನೂನನ್ನು ಜಾರಿಗೆ ತರಲಾಗುವುದೇ ?

ಶ್ರೀ ಬಂಡೆಪ್ಪ ಕಾಶಂಪೂರ

ಅ) 2006–07ನೇ ಸಾಲಿನಲ್ಲಿ 320 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ

ಆ) ಸಾವಿಗೀಡಾದ ರೈತರ ಪೈಕಿ ಖಾಸಗಿ ಹಾಗೂ ಹಣಕಾಸು ಸಂಸ್ಥೆಗಳಿಂದ ಸಾಲಪಡೆದ ರೈತರ ಸಂಖ್ಯೆ–243

ಇ) ಇಲ್ಲಾ

ಈ) ಈವರೆಗೆ ಇಲ್ಲಾ

ಈ) ಕಾನೂನು ಪ್ರಕಾರ ಪರಿಶೀಲಿಸಲಾಗುವುದು

ತಿರುಪತಿಯಲ್ಲಿ ಅತಿಥಿ ಗೃಹಗಳ ಅವ್ಯವಸ್ಥೆ

214 (244) ಶ್ರೀ ನೆ ಲ ನರೇಂದ್ರ ಬಾಬು (ರಾಜಾಜಿನಗರ)

ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ತಿರುಪತಿಯಲ್ಲಿರುವ ಕರ್ನಾಟದ ಭವನದ ಕೊರಡಿಗಳ ಸಂಖ್ಯೆ ಎಷ್ಟು,

ಆ) ಈ ಅತಿಥಿ ಗೃಹಗಳನ್ನು ಯಾವ ಯಾವ ವ್ಯಕ್ತಿಗಳಿಗೆ ಕಾಯ್ದಿರಿಸಲಾಗುವುದು,